श्रीमूलगोपालकृष्णो विजयते श्री पट्टाभिरामो विजयते

श्री व्यासराजो विजयते

ಶ್ರೀಧೂಮಾಲಕ್ಷ್ಮೀನರಸಿಂಹೋ ವಿಜಯತೇ

ಶ್ರೀಶ್ರೀಮದಲಗಟ್ಟಿಪ್ರಾಣರಾಜೋ ವಿಜಯತೇ

ಕುಲದೇವತಾ ಶ್ರೀತುಳಜಾಭವಾನೀ ವಿಜಯತೇ

ಶ್ರೀಸತ್ಯವೀರತೀರ್ಥಗುರುರಾಜಾ ವಿಜಯಂತೇ

ಶ್ರೀಗುರುಭ್ಯೋ ನಮ:

ಸ ಹಿ ಸರ್ವಮನೋವೃತ್ತಿಪ್ರೇರಕ:

# ದ್ವಾದಶಸ್ತೋತ್ರಗಳು

ಶ್ರೀಮದಾಚಾರ್ಯರು ಭಗವಂತನ ಅನೇಕರೂಪಗಳನ್ನು ಅವಯವ-ಗಳನ್ನು, ಗುಣಗಳನ್ನು, ವ್ಯಾಪಾರಗಳನ್ನು ತಿಳಿಸುವ, ವಿಧವಿಧವಾದ ಛಂದಸ್ಸಿ-ನಿಂದ ಕೂಡಿರುವ, ಸಂಗೀತದ ರಾಗ-ತಾಳಗಳಿಗೆ ಹೊಂದಿಕೊಳ್ಳುವ ಸ್ತೋತ್ರ-ಗಳ ಸಮೂಹವೇ **ದ್ವಾದಶಸ್ತೋತ್ರ**. ದ್ವಾದಶ(12) ಸ್ತೋತ್ರರೂಪವಾದ ಅಧ್ಯಾಯಗಳನ್ನು ಒಳಗೊಂಡಿದೆಯಾದ್ದರಿಂದ ಇದಕ್ಕೆ **ದ್ವಾದಶಸ್ತೋತ್ರ** ಎಂದು ಅನ್ವರ್ಥಕ ಹೆಸರು ಬಂದಿದೆ.

## ಈ ಸ್ತೋತ್ರದ ಬಗ್ಗೆ ಜ್ಞಾನಿಗಳ ಉಲ್ಲೇಖ

೧) **....ದ್ವಾದಶಸ್ತೋತ್ರಪಾಠಂ ಶಿಷ್ಯಾನ್ ಆಶ್ರಾವಯತ್....** ಎಂದು ಟೀಕಾಚಾರ್ಯರ ಸಾಕ್ಷಾತ್ ಶಿಷ್ಯರಾದ, ಸರ್ವಜ್ಞಾನಿಗಳಿಂದ ವಂದ್ಯರಾದ, ಬಿಡಿಸನ್ಯಾಸಿಗಳಾದ **ಶ್ರೀವ್ಯಾಸತೀರ್ಥರು** ತಮ್ಮ **ಜಯತೀರ್ಥವಿಜಯ**ದಲ್ಲಿ ತಿಳಿಸಿದ್ದಾರೆ.

೧)'**ದ್ವಾದಶಸ್ತೋತ್ರಮಕರೋತ್....**' ಎಂದು **ಶ್ರೀಚಂದ್ರಿಕಾಚಾರ್ಯರು** **ಗಂಥಮಾಲಿಕಾಸ್ತೋತ್ರದಲ್ಲಿ** ನಿರೂಪಿಸಿದ್ದಾರೆ.

೨)'**....ವಂದೇ ವಂದ್ಯಮಿತಿ ಸ್ತುತೇ: । ....ಮಧ್ವಕೃತಿತಾ....**' ಎಂದು ಸೋದೆ **ಶ್ರೀವಾದಿರಾಜಸ್ವಾಮಿಗಳು** **ಏಕಾದಶೀನಿರ್ಣಯ** ಎಂಬ ಗ್ರಂಥದಲ್ಲಿ ಈ ಗ್ರಂಥದ ಬಗ್ಗೆ ಉಲ್ಲೇಖವನ್ನು ಮಾಡಿದ್ದಾರೆ. ಅಲ್ಲದೆ ತಮ್ಮ **ಗ್ರಂಥಮಾ-ಲಿಕಾಸ್ತೋತ್ರದಲ್ಲಿಯೂ** '**ಸ್ತುತೀ..**' ಎಂದು ಹೇಳಿದ್ದಾರೆ.

೪)**ಶ್ರೀಯಾದವಾರ್ಯರು** ತಮ್ಮ **ಗ್ರಂಥಮಾಲಿಕಾಸ್ತೋತ್ರದಲ್ಲಿ** '**ವಿಷ್ಣೋ: ಸ್ತೋತ್ರಯುಗಂ**' ಎಂಬಲ್ಲಿ ಇದನ್ನು ಸೂಚಿಸಿದ್ದಾರೆ.

೫)**ಬಿದರಹಳ್ಳಿ ಶ್ರೀನಿವಾಸತೀರ್ಥರು** '**ಸ್ತುತಿಯುಗಲಂ**' ಎಂದು ತಮ್ಮ **ಗ್ರಂಥಮಾಲಿಕಾಸ್ತೋತ್ರದಲ್ಲಿ** 'ಹೇಳಿದ್ದಾರೆ. ಮತ್ತು ತಮ್ಮ **ವಾಯುಗದ್ಯ-ದಲ್ಲಿಯೂ** '**ನಖಸ್ತುತಿ....ಗ್ರಂಥಕರ್ತ್ರೇ**' ಎಂದು ಹೇಳಿದ್ದಾರೆ.

(ಉಲ್ಲೇಖಿಸಿದ ಪ್ರಮಾಣಗಳಲ್ಲಿ ಎರಡು ಸ್ತೋತ್ರಗಳು ಎಂದರೆ ದ್ವಾದಶ ಸ್ತೋತ್ರ, ನಖಸ್ತುತಿ ಎಂದರ್ಥ. ಸಂದೇಹ ಬೇಡ.)

೭) **ಫಲಿಮಾರುಮಠದ ಶ್ರೀರಘುವರ್ಯತೀರ್ಥರು** ತಮ್ಮ **ಸೌರಭಪ್ರ-ಕಾಶಿಕೆಯಲ್ಲಿ** **ದ್ವಾದಶ ಸ್ತುತೀ: ಕುರ್ವನ್....** ಎಂದು ಹೇಳಿದ್ದಾರೆ.

೮) ಇದಲ್ಲದೆ ಇನ್ನನೇಕಜ್ಞಾನಿಗಳು, ಮುಖ್ಯವಾಗಿ ಈ ಗ್ರಂಥದ ವಿಶ್ವಪತಿ-ತೀರ್ಥರೇ ಮೊದಲಾದ ವ್ಯಾಖ್ಯಾನಕಾರರು 'ಈ ಗ್ರಂಥವು ಆಚಾರ್ಯರಚಿತ' ಎಂದು ಸ್ಪಷ್ಟಪಡಿಸಿದ್ದಾರೆ

೯) ಶ್ರೀಮುಷ್ಣಮಹಾತ್ಮ್ಯೆಯಲ್ಲಿಯೂ 'ವಂದೇ ವಂದ್ಯಂ....' ಎಂಬ ಸ್ತೋತ್ರದ ಮೂಲಕ ವರಾಹದೇವರನ್ನು ಆಚಾರ್ಯರು ಸ್ತುತಿಸಿದರು ಎಂಬ ಮಾಹಿತಿಯು ಲಭ್ಯವಾಗುತ್ತದೆ.

೧೦) ಸಕಲಮಾಧ್ವರಲ್ಲಿಯೂ ಈ ಗ್ರಂಥದ ಪಠನವು ಅನೂಚಾನವಾಗಿ ನಡೆಯುತ್ತಾ ಬಂದಿದೆ.

## ದ್ವಾದಶಸ್ತೋತ್ರರಚನೆಯ ಹಿನ್ನಲೆ

ದ್ವಾರಕೆಯಲ್ಲಿದ್ದ ಶ್ರೀಕೃಷ್ಣನ ವಿಗ್ರಹವು, ನೌಕೆಯ ಮೂಲಕ ಉಡುಪಿಯ ಸಮೀಪಕ್ಕೆ ಬಂದದ್ದನ್ನು ತಿಳಿದ ಶ್ರೀಮದಾಚಾರ್ಯರು, (ಮಲ್ಪೆಯ) ಸಮುದ್ರ-ತೀರಕ್ಕೆ ಹೋಗುತ್ತಾರೆ. ಅಲ್ಲಿ ಕೃಷ್ಣನ ವಿಗ್ರಹವು ಶ್ರೀಮದಾಚಾರ್ಯರಿಗೆ ಸಿಗುತ್ತದೆ. ಆ ಸಂದರ್ಭದಲ್ಲಿ ಶ್ರೀಮದಾಚಾರ್ಯರು ಮಾಡಿರುವ ಸ್ತೋತ್ರವೇ ದ್ವಾದಶಸ್ತೋತ್ರ.

ಈ ಚರಿತ್ರೆಯನ್ನು ಎಲ್ಲಾ ಮಾಧ್ವರೂ ಪಾರಂಪಾರಿಕವಾಗಿ ಹೇಳುತ್ತಾ, ಕೇಳುತ್ತಾ ಬಂದಿದ್ದಾರೆ.

ಅಷ್ಟೇ ಅಲ್ಲದೆ ಫಲಿಮಾರುಮಠದ ಶ್ರೀರಘುವರ್ಯತೀರ್ಥರು ಈ ವಿಷಯವನ್ನು ತಮ್ಮ **ಸೌರಭಪ್ರಕಾಶಿಕಾ** ಎಂಬ ಗ್ರಂಥದಲ್ಲಿ ಉಡುಪಿಶ್ರೀಕೃಷ್ಣ-ಪರಮಾತ್ಮನ ವಿಗ್ರಹದ ಚರಿತ್ರೆಯನ್ನು ಹೇಳುವ ಸಂದರ್ಭದಲ್ಲಿ ತಿಳಿಸಿದ್ದಾರೆ.

**अत्रैवं पूर्वाचार्यप्रवादः-**

**तत्र मग्नां समादाय प्रतिमां द्वादश स्तुतीः ।**

**कुर्वन् आनीय तां रूप्य आस्थापयदनल्पधीः ।।**

ಪೇಜಾವರಮಠದ ಶ್ರೀವಿಶ್ವಪತಿತೀರ್ಥರು ಕೂಡ ಶ್ರೀಕೃಷ್ಣನ ವಿಗ್ರಹವನ್ನು ತರುವ ಸಂದರ್ಭದಲ್ಲಿ ಈ ಸ್ತೋತ್ರವು ರಚಿತವಾದದ್ದು ಎಂದು ಹೇಳುವುದರ ಜೊತೆಗೆ ಮತ್ತೊಂದು ಸೂಕ್ಷ್ಮವಿಷಯವನ್ನು ಹೇಳುತ್ತಾರೆ. ಆಚಾರ್ಯರು '**ವಾಸುದೇವ ಅಪರಿಮೇಯ ಸುಧಾಮನ್**' ಎಂಬ ಐದನೆಯ ಅಧ್ಯಾಯವನ್ನು ರಚಿಸಿದಾಗ ಕೃಷ್ಣನ ವಿಗ್ರಹವು ದೊರೆಯುತ್ತದೆ. ಹಾಗಾಗಿ ಮುಂದಿನ ಅಧ್ಯಾಯದಲ್ಲಿ ಕೃಷ್ಣಪರಮಾತ್ಮನ ಸ್ತೋತ್ರವನ್ನು ವಿಶೇಷವಾಗಿ ಮಾಡುತ್ತಾರೆ. **ದೇವಕಿನಂದನ ನಂದಕುಮಾರ....** ಎಂದು.

ಹೀಗೆ ಶ್ರೀಕೃಷ್ಣಪರಮಾತ್ಮನನ್ನು ಪೂಜಿಸುವ, ಪ್ರಸಿದ್ಧಗ್ರಂಥಕರ್ತೃಗಳಾದ ಇಬ್ಬರು ಯತಿಗಳು, ತಮಗೆ '**ತಮ್ಮ ಪೂರ್ವಜರು ಹೇಳಿದ ಚರಿತ್ರೆ**' ಎಂದು ಹೇಳಿ, ಹೇಳಿದ ಕಥೆಯಿದು.

श्रीमूलगोपालकृष्णो विजयते श्री पट्टाभिरामो विजयते
श्री व्यासराजो विजयते

# ದ್ವಾದಶ ಸ್ತೋತ್ರವು ವಿಷಪರಿಹಾರಕ

ದ್ವಾದಶಸ್ತೋತ್ರದಲ್ಲಿ ಎಲ್ಲಾ ರೀತಿಯ ವಿಷವನ್ನು ಪರಿಹರಿಸುವ ಶಕ್ತಿಯಿದೆ ಎನ್ನುವುದು ಸಕಲಮಾಧ್ವರ ಬಲವಾದ ನಂಬಿಕೆ. ಆದ್ದರಿಂದಲೇ ಈ ಸ್ತೋತ್ರ-ವನ್ನು ನೈವೇದ್ಯದ ಸಂದರ್ಭದಲ್ಲಿ ಪಠಿಸುವುದು ಸಂಪ್ರದಾಯವಾಗಿ ಬಂದಿದೆ.

ಇದು ಕೇವಲ ನಂಬಿಕೆ ಅಷ್ಟೇ ಅಲ್ಲ. ಶ್ರೀಮದಾಚಾರ್ಯರು ತಾವೇ ಸೂಚಿಸಿದ್ದಾರೆ. **ವಂದೇ ವಂದ್ಯಂ** ಎಂಬಲ್ಲಿರುವ **ವಂ** ಎಂಬ ಅಕ್ಷರವು **ಅಮೃತ** ಎಂದು ಅರ್ಥವನ್ನು ನೀಡುತ್ತದೆ. ಕಡೆಯ ಅಧ್ಯಾಯದಲ್ಲಿರುವ **ಆನಂದತೀರ್ಥ ಪರಾನಂದವರದ** ಎಂಬಲ್ಲಿ **ದ** ಎಂದರೆ **ಕೊಡುವುದು** ಎಂದರ್ಥ. ಎರಡನ್ನು ಸೇರಿಸಿದರೆ **ವಂದ** ಎಂದಾಯಿತು. ಅಂದರೆ **ಅಮೃತಪ್ರದ** ಎಂದು ಸೂಚಿಸಿದಂತೆ ಆಯಿತು. ಭಗವದ್ಗೀತೆಯಲ್ಲಿ **ಧರ್ಮ** ಎಂದು ಇದ್ದಂತೆ.

ಮತ್ತು ಈ ಗ್ರಂಥ ಪ್ರತಿಪಾದ್ಯವಾದದ್ದು ವಾಸುದೇವರೂಪ. ವಾಸುದೇವ-ರೂಪಕ್ಕೆ ವಿಷಪರಿಹಾರತ್ವ, ಅಮೃತಪ್ರದತ್ವ, ಮೋಕ್ಷಪ್ರದತ್ವವು ಅತ್ಯಂತ ಸ್ಪಷ್ಟವಾದ ವಿಷಯ. ಅದಕ್ಕೆಂದೇ ಶ್ರೀಮದಾಚಾರ್ಯರು '**ವಂದೇ....ವಾಸು-ದೇವಂ....** ಎಂದು ಆರಂಭಿಸಿ, **ವಾಸುದೇವಾಯ ತೇ ನಮ:**, **ವಾಸುದೇವ ಅಪರಿಮೇಯ ಸುಧಾಮನ್, ಪ್ರೀಣಯಾಮೋ ವಾಸುದೇವಂ** ಎಂದು ವಾಸು-ದೇವರೂಪವನ್ನು ಪುನ:ಪುನ: ಉಲ್ಲೇಖಿಸುತ್ತಾ **ಆನಂದತೀರ್ಥಪರಾನಂದ-ವರದ**' ಎಂದು ಮೋಕ್ಷಪ್ರದತ್ವವನ್ನು ಚಿಂತಿಸಿ ಗ್ರಂಥವನ್ನು ಮುಗಿಸುತ್ತಾರೆ.

**श्रीमूलगोपालकृष्णो विजयते** **श्री पट्टाभिरामो विजयते**

**श्री व्यासराजो विजयते**

ಈ ದೃಷ್ಟಿಯಿಂದಲೇ ಶ್ರೀಮದಾಚಾರ್ಯರು **ದ್ವಾದಶಾಕ್ಷರಮಂತ್ರ** ಎಂದೇ ಪ್ರಸಿದ್ಧವಾದ **ವಾಸುದೇವಮಂತ್ರದ** ವಿವರಣೆಯೋ ಎಂಬಂತೆ ದ್ವಾದಶ ಅಧ್ಯಾಯರೂಪವಾದ ಸ್ತೋತ್ರಗಳನ್ನು ಒಳಗೊಂಡ **ದ್ವಾದಶಸ್ತೋತ್ರವನ್ನು** ರಚಿಸಿದ್ದಾರೆ. ಅದು **ದ್ವಾದಶಾಕ್ಷರಮಂತ್ರ**. ಇದು **ದ್ವಾದಶಸ್ತೋತ್ರಮಂತ್ರ.**

ಈ ಮಹಿಮೆಯನ್ನು ಸೂಚಿಸುವುದಕ್ಕಾಗಿಯೇ ಶ್ರೀಮದಾಚಾರ್ಯರು ತಮ್ಮ ಸೇವೆಗೆ ಬಂದ ಎತ್ತಿಗೆ (ವೃಷಭರೂಪದ ಟೀಕಾಚಾರ್ಯರಿಗೆ) ಸೇರಿದ್ದ ವಿಷವನ್ನು ದ್ವಾದಶಸ್ತೋತ್ರದ ಮೂಲಕವೇ ಪರಿಹರಿಸಿ, ಅದರಿಂದ ಹೇಳಿಸಿದರು.

ಇಂತಹ ದ್ವಾದಶಸ್ತೋತ್ರವನ್ನು ಕೃಷ್ಣಪರಮಾತ್ಮನ, ವಾಸುದೇವ-ರೂಪಿಯಾದ ಪರಮಾತ್ಮನ ಚಿಂತನೆಯೊಂದಿಗೆ ಪ್ರತಿನಿತ್ಯವೂ ಪಠಿಸಿ ಶ್ರೀಮದಾಚಾರ್ಯರ, ಆನಂದತೀರ್ಥವರದನಾದ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗೋಣ.

ಶ್ರೀಕೃಷ್ಣಾರ್ಪಣಮಸ್ತು

ಭೂಯಾತ್ತತ್ತ್ವವಿನಿರ್ಣಯಾಯ ಭಗವಾನ್ ಆನಂದತೀರ್ಥೋ ಮುನಿ:

ಶ್ರೀನಿವಾಸ ಕೊರ್ಲಹಳ್ಳಿ

೧೩/೧೨/೨೦೨೧